# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

## ಸತ್ರ ಮೊಕದ್ದಮೆ ನಂಃ 95/2024

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರದೀಪ್ | ಪಿಡಬ್ಲ್ಯೂ- 07 |
| ತಂದೆಯ ಹೆಸರು | - ಲಕ್ಷ್ಮಣಗೌಡ | ಸಿಡಬ್ಲ್ಯೂ- 05 |
| ವಯಸ್ಸು | - 37 ವರ್ಷ | |
| ಉದ್ಯೋಗ | - ದಾಸ್ತಾನು ನಿರ್ವಾಹಕರು, ಕೃಷಿ ಇಲಾಖೆ | |
| ವಾಸ ಸ್ಥಳ | - ಮೂಡಿಗೆರೆ | |

ದಿನಾಂಕಃ 20.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

### ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.1 ಮತ್ತು ಸಹಪಂಚರಾದ ಫ್ರಾಸಾ.3 ರವರು ಗೊತ್ತು, ಅವರು ನಮ್ಮ ಊರಿನವರು.
2. ಸಾಕ್ಷಿ ಈಗಾಗಲೇ ನಿಪಿ.7 ಮತ್ತು ಪಿ.5 ಎಂದು ಗುರುತಿಸಲ್ಪಟ್ಟಿರುವ

ನೋಟೀಸ್ ಮತ್ತು ಮಹಜರಿನಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ.7(ಬಿ) ಮತ್ತು ಪಿ.5(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಈಗ್ಗೆ ಒಂದು ವರ್ಷದ ಹಿಂದೆ ಚಿಕ್ಕಮಗಳೂರು ಬಸ್ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿರುವ ರಸ್ತೆ ಬದಿಯಲ್ಲಿ ಸದರಿ ಸಹಿಗಳನ್ನು ಮಾಡಿದ್ದೇನೆ.

3. ಆ ದಿನ ಫ್ರಾಸಾ.1 ರವರು ನನಗೆ ಫೋನ್ ಮಾಡಿ ತನ್ನ ತಾಯಿ ಕನಕರವರ ಕೊಲೆಯಾಗಿದೆ ಸಾಕ್ಷಿಗೆ ಸಹಿ ಮಾಡಬೇಕು ಬಾ ಎಂದು ಕರೆದಿದ್ದರು. ಅದರಂತೆ ನಾನು ಮೇಲೆ ಹೇಳಿದ ಸ್ಥಳಕ್ಕೆ ಹೋಗಿದ್ದೆನು. ನಾನು ಸದರಿ ಸಹಿಗಳನ್ನು ಮಾಡಿದಾಗ ಸಮಯ ಮಧ್ಯಾಹ್ನ 1.30 ಗಂಟೆಯಿಂದ 2 ಗಂಟೆಯಾಗಿರಬಹುದು.

4. ನಾನು ಸ್ಥಳಕ್ಕೆ ಹೋದಾಗ ಫ್ರಾಸಾ.1, ಅವರ ಸೋದರ ಸಂಬಂಧಿಯೊಬ್ಬರು ಮತ್ತು ಪೊಲೀಸರು ಇದ್ದರು. ಸದರಿ ಸ್ಥಳದಲ್ಲಿ ಫ್ರಾಸಾ.1 ರವರ ತಾಯಿ ಕೊಲೆಯಾಗಿದ್ದ ಬಗ್ಗೆ ಪೊಲೀಸರು ಮಹಜರ್ ಮಾಡಲು ಬಂದಿದ್ದರು. ಸಾಕ್ಷಿಗೆ ಈಗಾಗಲೇ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ ಫೋಟೋದಲ್ಲಿ ನನ್ನೊಂದಿಗೆ ಫ್ರಾಸಾ.1, ಫ್ರಾಸಾ.3 ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

5. ಪೊಲೀಸರು ಹೇಳಿದ್ದರಿಂದ ಮೇಲೆ ಗುರುತಿಸಿದ ದಾಖಲೆಗೆ ಸಹಿ ಮಾಡಿದೆನು ಮತ್ತು ಫೋಟೋಗೆ ನಿಂತುಕೊಂಡೆನು. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ತೆಗೆದುಕೊಂಡಿಲ್ಲ. ಈಗಾಗಲೇ ಮು.ಮಾ.1 ರಿಂದ 3 ಎಂದು ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ಸಹಿಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ

ಗುರುತಿಸಿದ ಮೇರೆಗೆ ಮು.ಮಾ.1(ಸಿ), ಮು.ಮಾ.2(ಸಿ) ಮತ್ತು ಮು.ಮಾ.3(ಸಿ) ಎಂದು ಗುರುತಿಸಲಾಯಿತು. ಪೊಲೀಸರು ಆ ದಿನ ನನ್ನಿಂದ 4 ರಿಂದ 5 ಸಹಿಗಳನ್ನು ಪಡೆದುಕೊಂಡರು, ಆದರೆ ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

6. ದಿಃ 10-05-2024 ರಂದು ಸ್ಥಳ ಪಂಚನಾಮೆಗೆ ಪಂಚರಾಗಿ ಸಹಕರಿಸುವಂತೆ ಪೊಲೀಸರು ನಿಮಗೆ ನಿಪಿ.7 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ.

7. ಸದರಿ ಸುಪ್ರಿಂ ಮೆಡಿಕಲ್ಸ್ ಹತ್ತಿರ ಪುಟ್ ಪಾತ್ ರಸ್ತೆಯಲ್ಲಿ ಫ್ರಾಸಾ.1 ರವರು ನಿಮ್ಮ ಮತ್ತು ಫ್ರಾಸಾ.3 ರವರ ಸಮಕ್ಷಮ ಪೊಲೀಸರಿಗೆ ಸ್ಥಳವನ್ನು ತೋರಿಸಿ ಆರೋಪಿ ತನ್ನ ತಾಯಿ ಕನಕರವರ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿದ್ದ ರಕ್ತದ ಕಲೆಗಳನ್ನು ಪೊಲೀಸರು ನಿಮ್ಮ ಸಮಕ್ಷಮ ಬ್ಯಾಂಡೇಜ್ ಬಟ್ಟೆಯ ತುಂಡುಗಳಿಂದ ಹೊರೆಸಿ ಸಂಗ್ರಹಿಸಿ, ಮಾದರಿಗಾಗಿ ಒಂದು ಸಾದಾ ಹತ್ತಿಯನ್ನು ಸಹ ಮು.ಮಾ.1 ರಿಂದ 3 ರಂತೆ ಸಂಗ್ರಹಿಸಿ ಅವುಗಳನ್ನು ಪ್ರತ್ಯೇಕವಾಗಿ ಖಾಕಿ ಬಣ್ಣದ ಕವರಿಗೆ ಹಾಕಿ ಸೀಲ್ ಮಾಡಿ ಅವುಗಳ

ಮೇಲೆ ನಿಮ್ಮ, ಫ್ರಾಸಾ.1 ಮತ್ತು ಫ್ರಾಸಾ.3 ರವರ ಸಹಿ ಇರುವ ಚೀಟಿಗಳನ್ನು ಅಂಟಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

8. ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ನಿಪಿ.5 ರಂತೆ ನಿಮ್ಮ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ನಿಮ್ಮ ಸಹಿಯನ್ನು ಪಡೆದಿದ್ದಾರೆ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋದಾಗ ಮಧ್ಯಾಹ್ನ 1.30 ರಿಂದ 2 ಗಂಟೆ ಆಗಿತ್ತು ಎನ್ನುತ್ತಾರೆ.

9. ಪೊಲೀಸರು ನಿಮಗೆ ನಿಪಿ.7 ರಂತೆ ನೋಟೀಸನ್ನು ಜಾರಿ ಮಾಡಿ ನಿಮ್ಮ ಸಮಕ್ಷಮ ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಜರುಗಿಸಿ ಮು.ಮಾ.1 ರಿಂದ 3 ಅನ್ನು ಅಮಾನತುಪಡಿಸಿಕೊಂಡಿದ್ದರೂ ಸಹ ಈಗ ಆರೋಪಿಯೊಂದಿಗೆ ಶಾಮೀಲಾಗಿ ನಿಮಗೆ ಏನು ಗೊತ್ತಿಲ್ಲ, ನೀವು ಏನ್ನನ್ನು ನೋಡಿಲ್ಲ ಎಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

10. ಫ್ರಾಸಾ.1 ಮತ್ತು ಫ್ರಾಸಾ.3 ರವರು ನಿಮ್ಮ ಊರಿನವರು ಮತ್ತು ನಿಮ್ಮ ಸ್ನೇಹಿತರು ಎಂದರೆ ಸರಿ.

11. ಮು.ಮಾ.1 ರಿಂದ ಮು.ಮಾ.3 ವಸ್ತುಗಳನ್ನು ಇರಿಸಲಾಗಿರುವ ಕವರ್ ಗಳನ್ನು ನೀವು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿಯೇ ನೋಡಿರುವುದು ಎಂದರೆ ಸರಿ. ನಿಪಿ.5 ಮತ್ತು ನಿಪಿ.7 ದಾಖಲೆಗಳಿಗೆ ಸಹಿ ಮಾಡಿರುವುದನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ